ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ದಿನಾಂಕ ೨೮-೩-೧೯೯೦ರ ಲಿಖಿತ ಮೂಲಕ ಉತ್ತರಿಸುವ ೭ನೇ ಪಟ್ಟಿಯಲ್ಲಿರುವ ೨೩ ಪ್ರಶ್ನೆಗಳ ಪೈಕಿ, ೬ ಪ್ರಶ್ನೆಗಳನ್ನು ಹೊರತುಪಡಿಸಿ. ಉಳಿದ ೧೭ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಹಕಾರಿ ರಂಗದ ಕಾರ್ಖಾನೆಗಳ ಆಡಳಿತದ ಬಗ್ಗೆ

೩೧೭. ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ (ಕಿತ್ತೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹಕಾರಿ ರಂಗದಲ್ಲಿನ ಆಡಳಿತ ಮಂಡಳಿಗೆ ಸದಸ್ಯರನ್ನು ಸರ್ಕಾರದವರು ನೇಮಕ ಮಾಡಲು ಕ್ರಮಗಳೇನು ?

ಆ) ಆಡಳಿತ ಮಂಡಳಿಯವರು ಅಧ್ಯಕ್ಷರನ್ನು ಆರಿಸುವಾಗ ಅಧಿಕಾರಿಗಳು ಮತ್ತು ನಾಮಕರಣ ಹೊಂದಿದವರನ್ನು ಮಾತ್ರ ಸೂಚಿಸುವುದು ಸೂಕ್ತವೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವೆಯವರು).—

ಅ) ಸರ್ಕಾರವು ಸಹಕಾರ ಸಂಘಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಆರ್ಥಿಕ ನೆರವನ್ನು ನೀಡುವುದರಿಂದ ಸಹಕಾರ ಸಂಘಗಳ ಕಾಯಿದೆ ಕಲಂ ೨೯ ಮತ್ತು ೫೩-ಎ ಪ್ರಕಾರ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಸದಸ್ಯರನ್ನು ನಾಮಕರಣ ಮಾಡಲಾಗಿದೆ. ಹಾಗೂ ಸಂಘಗಳ ಬೈಲಾಗಳಲ್ಲಿ ನಮೂದಿಸಿದ್ದರೆ ಸರ್ಕಾರದ ಹಿತರಕ್ಷಣೆಗಾಗಿ ಸರ್ಕಾರವು ಆಡಳಿತ ಮಂಡಳಿಗೆ ನಾಮಕರಣ ಮಾಡುತ್ತದೆ.

ಆ) ಅವಶ್ಯಕವಿಲ್ಲ.

ಹತ್ತಿ ಖರೀದಿಯ ಬಗ್ಗೆ

೩೧೮. ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ (ಕಿತ್ತೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮, ೧೯೮೮-೮೯, ೧೯೮೯-೯೦ನೇ ಸಾಲುಗಳ ಕರ್ನಾಟಕದ ಮಾರುಕಟ್ಟೆಗಳಲ್ಲಿ ಸಿ.ಸಿ.ಐ. ಮತ್ತು ಮಾರ್ಕೆಟಿಂಗ್ ಫೆಡರೇಷನ್ ಖರೀದಿಸಿದ ಹತ್ತಿಯ ಪ್ರಮಾಣವೆಷ್ಟು ?

ಆ) ಈ ವರ್ಷ ಹೆಚ್ಚು ಕ್ಷೇತ್ರದಲ್ಲಿ ಹತ್ತಿ ಬೆಳೆದಿದ್ದು ಸರ್ಕಾರದವರಿಗೆ ತಿಳಿಸಿದ್ದರೂ ಹೆಚ್ಚು ಪ್ರಮಾಣದಲ್ಲಿ ಹತ್ತಿ ಖರೀದಿ ಮಾಡದಿರಲು ಕಾರಣವೇನು ?

ಇ) ಸಹಕಾರಿ ನೂಲಿನ ಗಿರಣಿಗಳು ಸಧ್ಯ ರೈತರಿಂದ ಹತ್ತಿ ಖರೀದಿ ಮಾಡದಿರಲು ಕಾರಣಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ)	೧೯೮೭-೮೮	೧೯೮೮-೮೯	೧೯೮೯-೯೦ (೧೬-೩-೯೦ರ ವರೆಗೆ) (ಕ್ವಿಂಟಾಲುಗಳಲ್ಲಿ)
೧. ಸಿ. ಸಿ. ಐ.	೪೯೪೦೩	೧೫೫೯೦೩-೭೧	೮೭೩೯೮
೨. ಮಾರ್ಕೆಟಿಂಗ್ ಫೆಡರೇಷನ್	-೫೬೪೨೭	೫೮೬೩೩	೪೧೪೩೭